# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಉಪಲೋಕ್/ಬಿಡಿ/1356/2021
ಪಿಓ/ಎ.ಆರ್.ಇ-2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:25/01/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ **ಶ್ರೀ. ಎಂ. ಲಕ್ಷ್ಮಯ್ಯ, ಬಿನ್. ಲೇಟ್ ಗುಡ್ಡಯ್ಯ, ಪ್ರಧಾನ ವೀಕ್ಷಕರು, ತಾಲ್ಲೂಕು ಉಪ-ಕಾರಾಗೃಹ, ನರಸಿಂಹರಾಜಪುರ, ಚಿಕ್ಕಮಗಳೂರು ಜಿಲ್ಲೆ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಪಶ್ಚಿಮ ವಲಯ, ಮಂಗಳೂರು, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಚಿಕ್ಕಮಗಳೂರು, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ಎಂ. ಲಕ್ಷ್ಮಯ್ಯ, ಬಿನ್. ಲೇಟ್ ಗುಡ್ಡಯ್ಯ, ಪ್ರಧಾನ ವೀಕ್ಷಕರು, ತಾಲ್ಲೂಕು ಉಪ-ಕಾರಾಗೃಹ, ನರಸಿಂಹರಾಜಪುರ, ಚಿಕ್ಕಮಗಳೂರು ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಆದ ನೀವು **ಶ್ರೀ. ಎಸ್. ಕೆ. ಮಸ್ತಾನ್ ವಲಿ ಬಿನ್. ಎಸ್. ಕೆ. ಹಸೇನ್, ಟೈಲ್ಸ್ ಮತ್ತು ಸಿಮೆಂಟ್ ವ್ಯಾಪಾರ, ವಾಸ: ಬಸ್ತಿ ಮಠ, ನರಸಿಂಹರಾಜಪುರ, ಚಿಕ್ಕಮಗಳೂರು ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಚಿಕ್ಕಮಗಳೂರು ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ **ಸಂ:02/2017** ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

   i. ದೂರುದಾರರು ನರಸಿಂಹರಾಜಪುರ ಪೋಲೀಸ್ ಠಾಣೆಯ ಕೇಸ್. ನಂ.05/2017ರಲ್ಲಿ ನರಸಿಂಹರಾಜಪುರದ ಜೈಲಿನಲ್ಲಿ ಖೈದಿಯಾಗಿದ್ದು, ಅಗಾಗ್ಗೆ ದೂರುದಾರರ ಹೆಂಡತಿ ದೂರುದಾರರನ್ನು ನೋಡಲು ಮತ್ತು ಮಾತನಾಡಿಸಲು ಸದರಿ ಜೈಲಿಗೆ ಬಂದಾಗಲೆಲ್ಲಾ ಎದುರುದಾರರು ರೂ. 500/-, 1000/- ಲಂಚ ಪಡೆದು ಮಾತನಾಡಲು ಬಿಟ್ಟಿರುತ್ತಾರೆ ಹಾಗೂ ದೂರುದಾರರಿಗೆ ಸಕ್ಕರೆ ಖಾಯಿಲೆ ಇದ್ದು, ಎದುರುದಾರರನ್ನು ಮಾತ್ರೆ ಕೇಳಿದಾಗ, ಎದುರುದಾರರು ದೂರುದಾರರಿಗೆ 'ಮಾತ್ರೆ ಕೊಡಲು ನೀನು ನನಗೆ ಏನು ಕೊಟ್ಟಿದ್ದೀಯಾ, ಈ ರೀತಿ ಎಲ್ಲಾ ನಾವು

ನಿನ್ನನ್ನು ನೋಡಿಕೊಳ್ಳಬೇಕಾದರೆ ನೀನು ನಮಗೆ ಲಂಚದ ಹಣವನ್ನು ಕೊಡಬೇಕು', ಎಂದು ಪದೇ ಪದೇ ಕಿರಿಕಿರಿ ಮಾಡಿರುತ್ತಾರೆ. ಆಗ ದೂರುದಾರರು ಎದುರುದಾರರಿಗೆ 'ತಾನು ಹೊರಗೆ ಹೋದ ಮೇಲೆ ನೀವು ಕೇಳಿದ ಲಂಚದ ಹಣವನ್ನು ನಿಮಗೆ ತಂದುಕೊಡುತ್ತೇನೆ, ಅಲ್ಲಿಯವರೆವಿಗೂ ನೀವು ಮಾತ್ರೆ ಕೊಡಬೇಕು' ಎಂದು ಕೇಳಿಕೊಂಡಿರುತ್ತಾರೆ. ಆದರೂ ಸಹ ಎದುರುದಾರರು ದೂರುದಾರರಿಗೆ 'ನಿನ್ನ ಹೆಂಡತಿಗೆ ಹೇಳಿ ತರಿಸಿಕೊಂಡು ಕೊಡು' ಎಂದು ಕಿರಿಕಿರಿ ಮಾಡಿರುತ್ತಾರೆ. ಸ್ವಲ್ಪ ದಿನದ ನಂತರ ದೂರುದಾರರಿಗೆ ಹೈಕೋರ್ಟ್‌ನಿಂದ ಜಾಮೀನು ಆಗಿದ್ದ ವಿಷಯ ಎದುರುದಾರರಿಗೆ ತಿಳಿದು, ದೂರುದಾರರನ್ನು ಕರೆಸಿಕೊಂಡು 'ಇಷ್ಟುದಿನ ಜೈಲಲ್ಲಿ ಸುಖವಾಗಿದ್ದೆ, ಅದಕ್ಕೆ ನೀನು 2-ಲಕ್ಷ ರೂಪಾಯಿ ಲಂಚದ ಹಣ ಕೊಡಬೇಕು, ಇಲ್ಲದಿದ್ದರೆ ನಿನ್ನ ಮೇಲೆ ಯಾವುದಾದರೂ ಒಂದು ಹೊಸ ಕೇಸ್ ಮಾಡಿಸಿ, ನೀನು ಜೈಲಿಗೆ ಬಂದನಂತರ ನಿನ್ನನ್ನು ಸಿಂಗಲ್ ಸೆಲ್ಲಿಗೆ ಹಾಕಿ ನಿನಗೆ ಸರಿಯಾದ ಪಾಠ ಕಲಿಸಿ ಲಾಠಿಯಲ್ಲಿ ಹೊಡೆಯುತ್ತೇನೆ' ಎಂದು ಹೆದರಿಸಿರುತ್ತಾರೆ. ಆಗ ಎದುರುದಾರರಿಗೆ ದೂರುದಾರರು 'ತಾನು ಕೇಸಿಗಾಗಿ ಬಹಳಷ್ಟು ಸಾಲ ಮಾಡಿದ್ದು, 2-ಲಕ್ಷ ರೂಪಾಯಿ ತನ್ನ ಬಳಿ ಇಲ್ಲ ಸ್ವಲ್ಪ ಕಡಿಮೆ ಮಾಡುವಂತೆ ಕೇಳಿದ್ದು, ಅದಕ್ಕೆ ಎದುರುದಾರರು ಒಪ್ಪಿರುವುದಿಲ್ಲ, ಪುನ: ಪುನ: ದೂರುದಾರರು ಎದುರುದಾರರನ್ನು ಲಂಚದ ಹಣವನ್ನು ಕಡಿಮೆ ಮಾಡುವಂತೆ ಕೇಳಿಕೊಂಡಾಗ, ಎದುರುದಾರರು ಕೊನೆಯದಾಗಿ ಒಂದು ಲಕ್ಷದ ಹತ್ತುಸಾವಿರ ರೂಪಾಯಿಗಳಿಗೆ ಒಪ್ಪಿಕೊಂಡಿದ್ದು, ಜೈಲಿನಿಂದ ಹೊರಗೆ ಹೋದ ಕೂಡಲೆ ಲಂಚದ ಹಣವನ್ನು ತಂದುಕೊಡುವುದಾಗಿ ಹೇಳಿದ್ದು, ದಿನಾಂಕ: 27/04/2017ರಂದು ದೂರುದಾರರು ಜೈಲಿನಿಂದ ಬಿಡುಗಡೆ ಹೊಂದಿ ಮನೆಗೆ ಬಂದಿರುತ್ತಾರೆ. ದಿನಾಂಕ: 28/04/2017ರಂದು ದೂರುದಾರರಿಗೆ ನರಸಿಂಹರಾಜಪುರದ ಕೋರ್ಟ್ ಇದ್ದು, ಆಮೇಲೆ 4-ದಿನ ರಜಾ ಬಂದಿದ್ದು, ದಿನಾಂಕ:03/05/2017ರಂದು ಎದುರುದಾರರು ದೂರುದಾರರ ಮನೆಯ ಹತ್ತಿರ ಬಂದು, ದೂರುದಾರರಿಗೆ ಕರೆ ಮಾಡಿ ಮನೆಯಿಂದ ಹೊರಗೆ ಬರುವಂತೆ ಕರೆದಿದ್ದು, ದೂರುದಾರರು ಮನೆಯಿಂದ ಹೊರಗೆ ಬಂದು ಎದುರುದಾರರನ್ನು ಮನೆಯ ಒಳಗೆ ಕರೆದುಕೊಂಡು ಹೋಗಿದ್ದು, ಮನೆಯ ಒಳಗಡೆ ಎದುರುದಾರರು ದೂರುದಾರರನ್ನು ಜೈಲಿನಲ್ಲಿದ್ದಾಗ ಕೇಳಿದ್ದ ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ. ಎದುರುದಾರರು ದೂರುದಾರರ ಮನೆಯ ಒಳಗಡೆ ಬರುವುದನ್ನು ಹಾಗೂ ಮನೆಯ ಒಳಗೆ ಬಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ದೂರುದಾರರು ತನ್ನ ಮೊಬೈಲ್‌ನಲ್ಲಿ ವಿಡಿಯೋ ಚಿತ್ರೀಕರಣ ಮತ್ತು ಆಡಿಯೊ (ಧ್ವನಿ ಮುದ್ರಣ) ಮಾಡಿಕೊಂಡಿರುತ್ತಾರೆ.

ii. ದಿನಾಂಕ: 03/05/2017ರಂದು ಸಂಜೆ 19-00 ಗಂಟೆಗೆ ದೂರುದಾರರು 1,10,000/-ಸಾವಿರ ರೂಪಾಯಿ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ ತನಿಖಾಧಿಕಾರಿಗಳನ್ನು ಭೇಟಿಮಾಡಿ ಕಂಪ್ಯೂಟರ್ ಮುದ್ರಿತ ದೂರು ನೀಡಿದ್ದು, ಅದರ

ಆಧಾರದ ಮೇಲೆ ಚಿಕ್ಕಮಗಳೂರು ಎಸಿಬಿ ಪೋಲಿಸ್ ಠಾಣೆ ಮೊ. ಸಂ. 02/2017 ರಲ್ಲಿ ಕಲಂ 7, 13(1) (ಡಿ) ಸಹ ಕಲಂ 13 (2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ ದಿನಾಂಕ:04/05/2017ರಂದು ಬೆಳಿಗ್ಗೆ 8–00 ಗಂಟೆಗೆ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ ಕಲ್ಲೇಶ್ 2) ಶ್ರೀ ತಾಹಿರ್ ಊಲ್ಲಾ ಖಾನ್, (ನೆರಳು ಸಾಕ್ಷಿ), ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರ ಸಮಕ್ಷಮ ದೂರುದಾರರು ತಮ್ಮ ಮೊಬೈಲ್‌ನ್ನು ಹಾಜರು ಪಡಿಸಿದ್ದು, ಮೊಬೈಲ್‌ನಲ್ಲಿ ರೆಕಾರ್ಡ್ ಆಗಿದ್ದ ವಿಡಿಯೋ ಚಿತ್ರೀಕರಣ ಮತ್ತು ಆಡಿಯೊ (ಧ್ವನಿ ಮುದ್ರಣ)ಗಳನ್ನು ತೋರಿಸಿದ್ದು, ಅವುಗಳನ್ನು ಕಂಪ್ಯೂಟರ್‌ಗೆ ಹಾಕಿ ನಂತರ ಎರಡು ಸಿಡಿಗಳಿಗೆ ವರ್ಗಾಯಿಸಿರುತ್ತಾರೆ. ಸದರಿ ವಿಡಿಯೋ ಚಿತ್ರೀಕರಣ ಹಾಗೂ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ (ರೂ.2,000/– ಮುಖಬೆಲೆಯ 05–ನೋಟುಗಳು) ಒಟ್ಟು 10,000/– ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ಸದರಿ ನೋಟುಗಳ ಮೌಲ್ಯ ಹಾಗೂ ನಂ.ಗಳನ್ನು ಪಂಚರು ಪರಿಶೀಲಿಸಿ, ಪಂಚ ಸಾಕ್ಷಿ ಕಲ್ಲೇಶ್‌ರವರ ಮೂಲಕ ಬಿಳಿ ಹಾಳೆಯ ಮೇಲೆ ಬರೆಸಿರುತ್ತಾರೆ. ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲೀನ್ ಪೌಡರನ್ನು ಸವರಿದ್ದು, ಸದರಿ ಹಣವನ್ನು ಪಂಚ ಸಾಕ್ಷಿ ಕಲ್ಲೇಶ್‌ರವರ ಮೂಲಕ ದೂರುದಾರರು ಧರಿಸಿದ್ದ ಶರ್ಟಿನ ಎಡಭಾಗದ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ ಸಾಕ್ಷಿ ಕಲ್ಲೇಶ್‌ರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ತಾಹಿರ್ ಊಲ್ಲಾ ಖಾನ್‌ರವರಿಗೆ ದೂರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ಕೈಗಳಿಂದ ತಲೆಯನ್ನು ಒರೆಸಿಕೊಳ್ಳುವ ಮೂಲಕ ಸನ್ನೆ ನೀಡಬೇಕೆಂದು ತಿಳಿಸಿರುತ್ತಾರೆ. ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ಇಲಾಖೆಯ ಒಂದು ವಾಯ್ಸ್ ರೆಕಾರ್ಡ್‌ನ್ನು ಕೊಟ್ಟಿರುತ್ತಾರೆ. ತನಿಖಾಧಿಕಾರಿಗಳು ಈ ಎಲ್ಲಾ ಘಟನಾವಳಿಗಳನ್ನು ಫೋಟೋ ತೆಗೆದು ದಿನಾಂಕ: 04/05/2017ರಂದು ಬೆಳಿಗ್ಗೆ 08–30ರಿಂದ 10–00 ಗಂಟೆಯವರಿಗೆ ಚಿಕ್ಕಮಗಳೂರು ಎಸಿಬಿ ಕಚೇರಿಯಲ್ಲಿ

ಪ್ರಾಯೋಗಿಕ ಪಂಚನಾಮೆಯನ್ನು ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿರುತ್ತಾರೆ.

iv. ಅದೇ ದಿನ ಅಂದರೆ ದಿನಾಂಕ:04/05/2017ರಂದು ಬೆಳಿಗ್ಗೆ 10-15 ಗಂಟೆಗೆ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರದ ಬಸ್ತಿಮಠ ರಸ್ತೆಯಲ್ಲಿರುವ ಕರ್ನಾಟಕ ಬ್ಯಾಂಕ್ ಮುಂಭಾಗಕ್ಕೆ ಬಂದು ದೂರುದಾರರು ಹಾಗೂ ನೆರಳು ಸಾಕ್ಷಿಯಾದ ತಾಹಿರ್ ಉಲ್ಲಾ ಖಾನ್‌ರವರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ ಸೂಚನೆಯನ್ನು ಮತ್ತೊಮ್ಮೆ ನೆನಪಿಸಿ, ಎದುರುದಾರರನ್ನು ಭೇಟಿಮಾಡಲು ಕಳುಹಿಸಿ ಕೊಟ್ಟಿದ್ದು, ಸದರಿ ದೂರುದಾರರು ನೆರಳು ಸಾಕ್ಷಿಯೊಂದಿಗೆ ಅಲ್ಲೆ ಹತ್ತಿರದಲ್ಲಿದ್ದ ಅವರ ಮನೆಯ ಒಳಗಡೆಗೆ ಹೋಗಿದ್ದು, ನೆರಳು ಸಾಕ್ಷಿಯವರು ದೂರುದಾರರ ಮನೆಯ ಹಾಲ್‌ನಲ್ಲಿದ್ದ ದಿವಾನ್ ಕಾಟ್ ಮೇಲೆ ಕುಳಿತುಕೊಂಡಿದ್ದು, ನಂತರ ದೂರುದಾರರು ಎದುರುದಾರರ ಮೊಬೈಲ್ ನಂ.8123656742ನೇದ್ದಕ್ಕೆ ಕರೆ ಮಾಡಿದಾಗ, ಎದುರುದಾರರು ದೂರುದಾರರ ಮನೆಗೆ ಬಂದು, ಮನೆಯ ಹಾಲ್‌ನಲ್ಲಿದ್ದ ಸೋಪಾದ ಮೇಲೆ ಕುಳಿತು ಅವರಿಂದ ರೂ.10,000/- ಲಂಚದ ಹಣವನ್ನು ಕೇಳಿ ಒತ್ತಾಯಿಸಿದ್ದು, ದೂರುದಾರರು ಲಂಚದ ಹಣವನ್ನು ಕೊಟ್ಟಿದ್ದು, ಆಗ ಎದುರುದಾರರು ಸದರಿ ಲಂಚದ ಹಣವನ್ನು ಬಲಗೈಯಿಂದ ಪಡೆದು ಅವರು ಧರಿಸಿದ್ದ ಷರ್ಟಿನ ಮುಂಭಾಗದ ಎಡಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ಎದುರುದಾರರು ಉಳಿದ ಒಂದು ಲಕ್ಷ ಹಣವನ್ನು ಯಾವಾಗ ಕೊಡುತ್ತೀಯ ಎಂದು ಕೇಳಿದ್ದು, ಅದಕ್ಕೆ ದೂರುದಾರರು ದುಡ್ಡಿಗೆ ಬಹಳ ಕಷ್ಟ ಅಂತ ಹೇಳಿದಾಗ, ಎದುರುದಾರರು ಸೋಮವಾರ ಕೊಡು ಎಂದು ಹೇಳಿರುತ್ತಾರೆ. ನೆರಳು ಸಾಕ್ಷಿಯವರು ಸದರಿ ದೂರುದಾರರ ಮತ್ತು ಎದುರುದಾರರ ಸಂಭಾಷಣೆಯನ್ನು ಕೇಳಿರುತ್ತಾರೆ ಹಾಗೂ ನಡೆದ ಘಟನೆಯನ್ನು ಕಣ್ಣಾರೆ ನೋಡಿರುತ್ತಾರೆ. ಅದಾದ ಸ್ವಲ್ಪ ಸಮಯದ ನಂತರ ದೂರುದಾರರು ಮನೆಯಿಂದ ಹೊರಗಡೆ ಬಂದು ತಮ್ಮ ಕೈಯಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ತನಿಖಾಧಿಕಾರಿಗಳಿಗೆ ಸನ್ನೆ ಮಾಡಿರುತ್ತಾರೆ.

v. ಆ ಸಂದರ್ಭದಲ್ಲಿ ದೂರುದಾರರು ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಮತ್ತೊಬ್ಬ ಪಂಚರೊಂದಿಗೆ ಎದುರುದಾರರಿದ್ದ ಸ್ಥಳಕ್ಕೆ ಬಂದು ತಮ್ಮ ಗುರುತಿನ ಚೀಟಿ ತೋರಿಸಿ, ತಮ್ಮ ಪರಿಚಯ ಹೇಳಿ ಮತ್ತು ಅವರ ಪರಿಚಯ ಕೇಳಿ, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ತನಿಖಾಧಿಕಾರಿಗಳು ಎದುರುದಾರರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಗಳು ದೂರುದಾರರಿಂದ ಪಡೆದ ಲಂಚದ ಹಣವನ್ನು

ಹಾಜರುಪಡಿಸಲು ತಿಳಿಸಿದಾಗ, ಅವರು ಧರಿಸಿದ್ದ ಷರ್ಟಿನ ಮಂಭಾಗದ ಜೇಬಿನಿಂದ ಲಂಚದ ಹಣವನ್ನು ತೆಗೆದು ಹಾಜರುಪಡಿಸಿರುತ್ತಾರೆ. ಪಂಚರ ಮೂಲಕ ಅವುಗಳನ್ನು ಪರಿಶೀಲಿಸಲಾಗಿ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರುಗಳಿಗೆ ಹಾಗೂ ಮೌಲ್ಯಕ್ಕೆ ಹೋಲಿಕೆಯಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಸದರಿ ಲಂಚದ ಹಣದ ಬಗ್ಗೆ ಎದುರುದಾರರಲ್ಲಿ ವಿಚಾರಿಸಿದಾಗ, ಎದುರುದಾರರು ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಬದಲೀ ಶರ್ಟಿನ ವ್ಯವಸ್ಥೆ ಮಾಡಿ, ಸದರಿ ಶರ್ಟಿನ ಜೇಬನ್ನು ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಸದರಿ ಶರ್ಟನ್ನು ಹಾಗೂ ಲಂಚದ ಹಣವನ್ನು ಬೇರೆ ಕವರ್‌ನಲ್ಲಿ ಹಾಕಿ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

vi. ನಂತರ ತನಿಖಾಧಿಕಾರಿಗಳು ವಹಿಸಿಕೊಡುವ ಪಂಚನಾಮೆ ಕಾಲದಲ್ಲಿ ದೂರುದಾರರಿಗೆ ಎದುರುದಾರರನ್ನು ಭೇಟಿ ಮಾಡಲು ಹೋದಾಗ ಅವರೊಂದಿಗೆ ನಡೆಯುವ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಳ್ಳಲು ನೀಡಿದ್ದ ವಾಯ್ಸ್ ರೆಕಾರ್ಡ್‌ನ್ನು ಪಡೆದು, ಅದನ್ನು ಆನ್ ಮಾಡಿ ಕೇಳಿದಾಗ, ಅದರಲ್ಲಿದ್ದ ಸಂಭಾಷಣೆಯಲ್ಲಿ ದೂರುದಾರರು ಮಾತನಾಡಿರುವ ಧ್ವನಿಯನ್ನು ಪಂಚರು ಗುರುತಿಸಿರುತ್ತಾರೆ. ಎದುರುದಾರರ ಧ್ವನಿಯನ್ನು ನೆರಳು ಸಾಕ್ಷಿ ತಾಹಿರ್ ಉಲ್ಲಾ ಖಾನ್ ಅವರು ಗುರುತಿಸಿರುತ್ತಾರೆ. ಸದರೀ ಸಂಭಾಷಣೆಯನ್ನು ಲಿಪೀಕರಣ ಮಾಡಿ, ಲ್ಯಾಪ್‌ಟಾಪ್ ಮೂಲಕ ಸಿಡಿಗಳಿಗೆ ವರ್ಗಾಯಿಸಿರುತ್ತಾರೆ.

vii. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ "ನಾನು ದಿನಾಂಕ: 04/05/2017ರಂದು ಮಸ್ತಾನ ಎಂಬುವನು ದೂರವಾಣಿ ಕರೆಮಾಡಿ ಮನೆ ಹತ್ತಿರ ಬನ್ನಿ ನಿಮಗೆ ಹಣ ಕೊಡುತ್ತೇನೆಂದು ಹೇಳಿದರು. ಆದರೆ ಏಕೆ ಏನು ಎಂದು ಕೇಳಿದೆ, ಅದಕ್ಕೆ ಅವರು ಏನು ಉತ್ತರಿಸದೆ ನಾನು ಹಣ ಕೊಡುತ್ತೇನೆ ಎಂದರು. ಅದರಂತೆ ಅವರ ಮನೆಯ ಹತ್ತಿರ ಹೋದೆ. ಆದರೆ ಅವರು ಪೂರ್ವನಿಯೋಜಿತರಾಗಿ ನನಗೆ ತೊಂದರೆ ಕೊಡುವುದಕ್ಕಾಗಿ ಏನೋ ಪ್ಲಾನ್ ಮಾಡಿ ನನ್ನ ಕೈಗೆ ಹಣ ರೂ.10,000/- ಕೊಟ್ಟರು. ತಕ್ಷಣ ಎಸಿಬಿ ಪೋಲೀಸಿನವರು ಬಂದು ನನ್ನನ್ನು ಹಿಡಿದುಕೊಂಡರು. ಇದರ ಬಗ್ಗೆ ನನಗೆ ಏನೂ ತಿಳಿದಿರುವುದಿಲ್ಲ ಎಂದು ಈ ಮೂಲಕ ತಮ್ಮಲ್ಲಿ ಅರಿಕೆ ಮಾಡಿಕೊಳ್ಳತ್ತೇನೆ. ಈ ವಿಷಯದ ಬಗ್ಗೆ ನನಗೇನೂ ತಿಳಿದಿರುವುದಿಲ್ಲ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದಿನಾಂಕ: 03/05/2017 ರಂದು ದೂರುದಾರ ಮತ್ತು ಎದುರುದಾರರ ನಡುವೆ ನಡೆದ

ಸಂಭಾಷಣೆಯನ್ನು ಎದುರುದಾರರ ಸಹೋದ್ಯೋಗಿ ಹೆಡ್ ವಾರ್ಡನ್ ಎಸ್. ಮೂರ್ತಿ, ನರಸಿಂಹರಾಜಪುರ ತಾಲ್ಲೂಕು ಕಾರಾಗೃಹ ರವರಿಗೆ ಕೇಳಿಸಿದ್ದು, ಅವರು ಸದರಿ ಸಂಭಾಷಣೆಯಲ್ಲಿರುವ ಒಂದು ಧ್ವನಿಯು ಎದುರುದಾರರ ಧ್ವನಿಯೆಂದು ಎಂದು ಗುರುತಿಸಿರುತ್ತಾರೆ.

viii. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ಹಂತ ಹಂತವಾಗಿ ಫೋಟೋಗಳನ್ನು ತೆಗೆಯಿಸಿ, ದಿನಾಂಕ:04/05/2017ರಂದು 13–40 ಗಂಟೆಯಿಂದ 17–10 ಗಂಟೆಯವರೆಗೆ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರದ ಬಸ್ತಿಮಠ ರಸ್ತೆಯಲ್ಲಿರುವ ದೂರುದಾರರ ಮನೆಯಲ್ಲಿ ಕಂಪ್ಯೂಟರ್‌ನಲ್ಲಿ ಟ್ರ್ಯಾಪ್ ಮಹಜರ್‌ನ್ನು ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಲಂಚದ ಹಣವನ್ನು ಜಪ್ತು ಮಾಡಿಕೊಂಡು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ ಹಾಗೂ ಎದುರುದಾರರನ್ನು ಲಂಚದ ಹಣ ಸ್ವೀಕರಿಸಿದ ಕಾರಣಕ್ಕಾಗಿ ದಸ್ತಗಿರಿ ಮಾಡಿರುತ್ತಾರೆ.

ix. ಮುಂದುವರೆದು, ದಿನಾಂಕ: 05/05/2017ರಂದು ತನಿಖಾಧಿಕಾರಿಗಳು ದೂರುದಾರರ ಮಾದರಿ ಧ್ವನಿ ಸಂಗ್ರಹಿಸುವ ಅವಶ್ಯಕತೆಯಿದ್ದು, ಸರ್ಕಾರಿ ಪಂಚರುಗಳಾದ 1) ಶ್ರೀ ಕಲ್ಲೇಶ್ 2) ಶ್ರೀ ತಾಹಿರ್ ಉಲ್ಲಾ ಖಾನ್, ಇವರುಗಳನ್ನು ಚಿಕ್ಕಮಗಳೂರು ಎಸಿಬಿ ಕಚೇರಿಗೆ ಬರಮಾಡಿಕೊಂಡಿದ್ದು, ಅವರ ಸಮಕ್ಷಮ ಟ್ರ್ಯಾಪ್ ಪೂರ್ವದಲ್ಲಿ ಹಾಗೂ ಟ್ರ್ಯಾಪ್ ಸಮಯದಲ್ಲಿ ನಡೆಸಿದ ಸಂಭಾಷಣೆಯನ್ನು ಓದಲು ಪ್ರತಿಲೇಖವನ್ನು ತಯಾರಿಸಿದ್ದು, ಅದನ್ನು ದೂರುದಾರರಿಂದ ಮತ್ತು ಎದುರುದಾರರಿಂದ ಮೂರು ಮೂರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್‌ಗೆ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಸಿಡಿಗಳನ್ನು ತಯಾರಿಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿನಾಂಕ:05/05/2017ರಂದು ಬೆಳಿಗ್ಗೆ 10–00 ಗಂಟೆಯಿಂದ ಮಧ್ಯಾಹ್ನ 12–10 ಗಂಟೆಯವರೆಗೆ ಚಿಕ್ಕಮಗಳೂರು ಎಸಿಬಿ ಕಚೇರಿಯಲ್ಲಿ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ.

x. ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಆಗುತ್ತದೆ ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ಕಂಡುಬರುತ್ತದೆ. ತನಿಖಾಧಿಕಾರಿಗಳು ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಎದುರುದಾರರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ

ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

xi. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ರಾಸಾಯನಿಕ ತಜ್ಞರ ವರದಿ, ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

xii. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 08/11/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ದೂರುದಾರರು ಮಾಡಿರುವ ಆರೋಪಗಳು ಸುಳ್ಳಿನಿಂದ ಕೂಡಿರುತ್ತವೆ. ತಾನು ಕರ್ತವ್ಯ ನಿರ್ವಹಿಸಿರುವ ಅವಧಿಯಲ್ಲಿ ತನ್ನ ಮೇಲೆ ಯಾವುದೇ ದೂರುಗಳಾಗಲೀ ಅಥವಾ ದುರ್ನಡತೆಯಾಗಲೀ ಇರುವುದಿಲ್ಲ. ದೂರುದಾರರು ದಿನಾಂಕ:27/04/2017ರಂದು ಕಾರಾಗೃಹದಿಂದ ಬಿಡುಗಡೆಯಾದ ನಂತರ ರೂ.2–ಲಕ್ಷ ಹಣನೀಡಬೇಕೆಂದು ಬೇಡಿಕೆ ಇಟ್ಟಿರುವ ಆರೋಪವು ಸತ್ಯಕ್ಕೆ ದೂರವಾಗಿದ್ದು, ಸುಳ್ಳಿನಿಂದ ಕೂಡಿರುತ್ತದೆ. ದೂರುದಾರರು ಕಾರಾಗೃಹದಲ್ಲಿದ್ದ ಸಂದರ್ಭದಲ್ಲಿ ಅವರ ಕಾನೂನಿಗೆ ವಿರುದ್ಧವಾದ ಬೇಡಿಕೆಗಳಿಗೆ ಸ್ಪಂದಿಸದೆ, ಕರ್ತವ್ಯ ನಿರ್ವಹಿಸಿದ್ದರಿಂದ ಅವರು ನನ್ನ ಮೇಲೆ ದ್ವೇಷ ಇಟ್ಟುಕೊಂಡು ಈ ರೀತಿಯ ಸುಳ್ಳು ದೂರನ್ನು ದಾಖಲಿಸಿರುತ್ತಾರೆ. ನಮ್ಮ ಜೈಲ್‌ನಲ್ಲಿ ಬಂಧಿಗಳಿಗೆ ಆಹಾರವನ್ನು ಸರಬರಾಜು ಮಾಡುತ್ತಿದ್ದ ಆರ್. ಎಸ್. ಚಾಬು ಮತ್ತು ದೂರುದಾರರು ಸ್ನೇಹಿತರಾಗಿದ್ದು, ಇಬ್ಬರೂ ಮುಸ್ಲಿಮ್ ಜನಾಂಗಕ್ಕೆ ಸೇರಿದವರಾಗಿರುತ್ತಾರೆ ಹಾಗೂ ದೂರುದಾರ ನಮ್ಮ ಕಾರಾಗೃಹಕ್ಕೆ ಬರುವ ಮುಂಚೆ ಇಬ್ಬರ ನಡುವೆ ಹಣಕಾಸಿನ ವ್ಯವಹಾರ ಇರುತ್ತದೆ, ಮುಂದುವರೆದು ಆರ್. ಎಸ್. ಚಾಬುರವರ ಮನೆಗೆ ಗ್ರಾನೈಟ್‌ನ್ನು ದೂರುದಾರ ಅಳವಡಿಸಿರುತ್ತಾರೆ, ಇವರಿಬ್ಬರ ನಡುವೆ

ಮೊದಲಿನಿಂದಲೂ ಎಲ್ಲಾ ರೀತಿಯ ವ್ಯವಹಾರಗಳು ಇರುತ್ತವೆ. ಪ್ರಧಾನ ಕಾರಾಗೃಹ ವೀಕ್ಷಕನಾದ ನಾನು ಹಲವಾರು ಬಾರಿ ಆರ್. ಎಸ್. ಚಾಬುರವರು ಬಂಧಿಗಳಿಗೆ ಸರಬರಾಜು ಮಾಡುತ್ತಿದ್ದ ಆಹಾರದ ಗುಣಮಟ್ಟವನ್ನು ಪರಿಶೀಲಿಸಿ, ಸರಿಯಾದ ಗುಣಮಟ್ಟದ ಆಹಾರವನ್ನು ಸಥಬರಾಜು ಮಾಡುವಂತೆ ಇಲ್ಲದಿದ್ದರೆ ನಿಮ್ಮ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಕಟ್ಟುನಿಟ್ಟಾಗಿ ಬಾಯಮಾತಿನ ಮುಖಾಂತರ ಸೂಚನೆ ನೀಡಿರುತ್ತೇನೆ, ಇದೇ ಕಾರಣಕ್ಕೆ ಆರ್. ಎಸ್. ಚಾಬು ಮತ್ತು ದೂರುದಾರರು ನನ್ನ ವಿರುದ್ಧ ಒಳಸಂಚು ರೂಪಿಸಿ, ನನ್ನ ಮೇಲೆ ಸುಳ್ಳು ಆರೋಪ ಮಾಡಿ ನಿರಪರಾದಿಯಾದ ನನ್ನನ್ನು ಈ ಪ್ರಕರಣದಲ್ಲಿ ಸಿಲುಕಿಸಿರುತ್ತಾರೆ. ನಂತರ ದಿನಾಂಕ;03/05/2017ರಂದು ಆರ್. ಎಸ್. ಚಾಬುರವರು ನಮ್ಮ ಜೈಲಿಗೆ ಎಂದಿನಂತೆ ಬೆಳಿಗ್ಗೆ ಸುಮಾರು 7–30 ಗಂಟೆಗೆ ಆಹಾರವನ್ನು ಬಂಧಿಗಳಿಗೆ ಸರಬರಾಜು ಮಾಡಲು ಬಂದಿರುತ್ತಾರೆ, ಆಗ ಅವರು ನೀವು ಖಜಾನೆ ವ್ಯವಹಾರಕ್ಕೆ ಹೋಗುವುದಾದರೆ ನನ್ನ ಸ್ನೇಹಿತ ಮಸ್ತಾನ್‌ವಾಲಿ ನನಗೆ ಹಣವನ್ನು ನೀಡಬೇಕು ನೀವು ಆತನಿಂದ ಹಣವನ್ನು ಪಡೆದುಕೊಂಡು ನನಗೆ ತಂದುಕೊಡಿ ಎಂದು ಹೇಳಿದೆನು. ಅದರಂತೆ ನಾನು ದೂರುದಾರರನ್ನು ಭೇಟಿಯಾಗಿ, ಆರ್. ಎಸ್. ಚಾಬುರವರಿಗೆ ಕೊಡಬೇಕಾದ ಹಣವನ್ನು ನನ್ನ ಹತ್ತಿರ ನೀಡುವಂತೆ ತಿಳಿಸಿರುತ್ತಾರೆ ಎಂದು ಹೇಳಿದಾಗ, ದೂರುದಾರರು ನೀವು ನಾಳೆ ಇದೇ ಮಾರ್ಗವಾಗಿ ಬರುತ್ತೀರಲ್ಲಾ ಆವಾಗ ನಿಮ್ಮ ಕೈಗೆ ನೀಡುತ್ತೇನೆ ಎಂದು ತಿಳಿಸಿದನು. ಅದರಂತೆ ನಾನು ಎಂದಿನಂತೆ ಖಜಾನೆಗೆ ಹೋಗುವಾಗ ದಿನಾಂಕ:04/05/2017ರಂದು ದೂರುದಾರ ಮಸ್ತಾನ್‌ವಾಲಿ ರವರ ಮನೆಯ ಹತ್ತಿರ ಹೋದಾಗ, ಮಸ್ತಾನ್‌ವಲಿರವರು ನನಗೆ 10,000/– ಕೊಟ್ಟು ಆರ್. ಎಸ್. ಚಾಬುರವರಿಗೆ ತಲುಪಿಸಿ ಎಂದು ತಿಳಿಸಿದರು. ನಾನು ಹಣವನ್ನು ಪಡೆದು ಬರುವಾಗ ಎಸಿಬಿ ದಳದವರು ನನ್ನ ಹತ್ತಿರ ಇದ್ದ ಹಣವನ್ನು ಪಡೆದುಕೊಂಡು ನನ್ನ ವಿರುದ್ಧ ಸುಳ್ಳು ಕೇಸನ್ನು ದಾಖಲಿಸಿರುತ್ತಾರೆ. ದೂರುದಾರರಾದ ಮಸ್ತಾನವಲಿ ಮತ್ತು ಕಾರಾಗೃಹಕ್ಕೆ ಆಹಾರ ಸರಬರಾಜು ಮಾಡುತ್ತಿದ್ದ ಆರ್. ಎಸ್. ಚಾಬುರವರು ನನ್ನ ವಿರುದ್ಧ ಒಳಸಂಚು ಮಾಡಿ ನನ್ನನ್ನು ಈ ಪ್ರಕರಣದಲ್ಲಿ ಸಿಲುಕಿಸಿರುತ್ತಾರೆ. ನಾನು ದೂರುದಾರರಾದ ಮಸ್ತಾನವಲಿರವರಿಂದ ಯಾವುದೇ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದಿಲ್ಲ ಮತ್ತು ನಾನು ಅವರಿಂದ ಯಾವುದೇ ಲಂಚದ ಹಣವನ್ನು ಸ್ವೀಕರಿಸಿರುವುದಿಲ್ಲ. ಇದು ಸಂಪೂರ್ಣವಾಗಿ ನನ್ನ ವಿರುದ್ಧ ಮಾಡಿರುವ ಒಳಸಂಚಾಗಿರುತ್ತದೆ. ನಾನು ನನ್ನ ಕರ್ತವ್ಯವನ್ನು ಇಲ್ಲಿಯವರೆಗೂ ಸರ್ಕಾರದ ಕಾನೂನು ನಿಯಮಗಳ ಅಡಿಯಲ್ಲಿ ನಿಷ್ಠೆಯಿಂದ ಮಾಡಿಕೊಂಡು ಯಾವುದೇ ಆಮಿಷಗಳಿಗೆ ಬಲಿಯಾಗದೇ ಶಿಸ್ತಿನಲ್ಲಿ ಮಾಡಿಕೊಂಡು ಬಂದಿರುತ್ತೇನೆ. ನಾನು ಉತ್ತಮ ಚಾರಿತ್ರ್ಯವುಳ್ಳವನಾಗಿದ್ದು, ನನ್ನ ವಿರುದ್ಧ ಯಾವುದೇ ಪ್ರಕರಣಗಳು ಇರುವುದಿಲ್ಲ. ಆದ್ದರಿಂದ, ನನ್ನ ಮೇಲೆ ಇಲಾಖಾ ವಿಚಾರಣೆ ನಡೆಸದಂತೆ ವಿಮುಕ್ತಗೊಳಿಸಬೇಕಾಗಿ ವಿನಂತಿ" ಎಂದು ಮುಂತಾಗಿ ಸಮಜಾಯಿಷಿಯನ್ನು ನೀಡಿರುತ್ತಾರೆ.

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಪಡೆದುಕೊಂಡಿದ್ದು, ತನ್ಮೂಲಕ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

6) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

28/1/22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
**ಉಪಲೋಕಾಯುಕ್ತರು-2**
**ಕರ್ನಾಟಕ ರಾಜ್ಯ, ಬೆಂಗಳೂರು.**